ಬೆಂಗಳೂರಿನಲ್ಲಿ ಅಂತರ್ ರಾಜ್ಯ ಬಸ್ ಟರ್ಮಿನಸ್ ನಿರ್ಮಿಸುವುದು

1357 (78) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಕ್ರೋಮ್ ಟ್ಯಾನಿಂಗ್ ಕಂಪನಿ ಬಳಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅಂತರ ರಾಜ್ಯ ಬಸ್ ಟರ್ಮಿನಸ್ ನಿರ್ಮಿಸಲು ನಿರ್ಧರಿಸಿದೆಯೇ;

ಆ) ಹಾಗಿದ್ದಲ್ಲಿ ಇದಕ್ಕಾಗಿ ತಗಲುವ ವೆಚ್ಚವೆಷ್ಟು;

ಇ) ಈ ಕಾಮಗಾರಿಯ ಪ್ರಗತಿಯನ್ನು ವಿವರಿಸುವುದು;

ಈ) ಈ ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಸುಮಾರು 21.00 ಕೋಟಿ ರೂಪಾಯಿಗಳು

ಇ) ಬೆಂಗಳೂರು ಕೆಂಪೇಗೌಡ ಬಸ್ ನಿಲ್ದಾಣದ ಸಂಚಾರ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ಕ.ರಾ.ರ.ಸಾ. ಸಂಸ್ಥೆಯು ಬೆಂಗಳೂರು ನಗರದ ನಾಲ್ಕು ಕಡೆಗಳಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಿರುತ್ತದೆ. ಈ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ ಬೆಂಗಳೂರು ಮೈಸೂರು ರಸ್ತೆಯಲ್ಲಿರುವ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿಗೆ ಸೇರಿದ 9.00 ಎಕರೆ ನಿವೇಶನವನ್ನು ಸಂಸ್ಥೆಯು ವಶಕ್ಕೆ ಪಡೆದಿರುತ್ತದೆ. ಈ ನಿವೇಶನದಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣದ ಸಮುಚ್ಚಯವನ್ನು ನಿರ್ಮಿಸಲು ಬೇಕಾದ ರೂಪುರೇಶೆಗಳನ್ನು ತಯಾರಿಸುವ ಕೆಲಸವನ್ನು ಚಿ: ಸ್ಪಾ ನ್ ಕನ್ಸಲಟೆಂಟ್ಸ್‌ರವರಿಗೆ ಮಹಿಸಲಾಗಿರುತ್ತದೆ. ಸದರಿಯವರು ಈಗಾಗಲೇ ವಿನ್ಯಾಸ, ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿರುತ್ತಾರೆ. ಅದರಂತೆ ಅಂದಾಜು ಮೊತ್ತವು 21.00 ಕೋಟಿ ರೂ.ಗಳಾಗಿರುತ್ತದೆ. ಆದಷ್ಟು ಬೇಗ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಿ ಟೆಂಡರ್ ಮೂಲಕ ಸಂಸ್ಥೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕೆಲಸ ಕೈಗೊಳ್ಳಲಾಗುವುದು.

ಈ) ಈ ಕಾಮಗಾರಿಯನ್ನು ಸೆಪ್ಟೆಂಬರ್ 2004ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಬೆಂಗಳೂರು ನಗರ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿಸಲು ಫ್ರಾನ್ಸ್ ದೇಶದ ಸಾಲ

1358 (80) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿ ಯೋಜನೆ ತಯಾರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಫ್ರಾನ್ಸ್ ದೇಶದೊಂದಿಗೆ ಒಪ್ಪಂದದ ಪತ್ರಕ್ಕೆ ಸಹಿ ಹಾಕಿದೆಯೇ;

ಆ) ಇದರಿಂದ ದೊರಕಲಿರುವ ಸಾಲದ ಹಣವೆಷ್ಟು;

ಇ) ಈ ಸಾಲಕ್ಕೆ ನೀಡಬೇಕಾದ ಬಡ್ಡಿ ದರದ ಹಣವೆಷ್ಟು;

ಈ) ಕೇವಲ ನಗರದ ಸಮಗ್ರ ಅಭಿವೃದ್ಧಿಗೆ ನಕ್ಷೆ ಇತ್ಯಾದಿ ತಯಾರಿಸಲು ಹೆಚ್ಚಿನ ಮೊತ್ತವನ್ನು ಖರ್ಚು ಮಾಡಲು ಕಾರಣಗಳೇನು;